## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 535
ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 16.09.2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೆಎಸ್‌ಆರ್‌ಟಿಸಿ ಮತ್ತು ಸಾರಿಗೆ ನೌಕರರ ಸಿಬ್ಬಂದಿ ಪ್ರತಿಭಟನೆ ಬಳಿಕ ವೇತನ ತಾರತಮ್ಯ ಸರಿದೂಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ : | ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ನಾಲ್ಕೂ ಸಾರಿಗೆ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರುಗಳನ್ನೊಳಗೊಂಡ ಸಮಿತಿಯು ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಆ | ಈ ನೌಕರರ ವೇತನ ಭತ್ಯೆ ಪರಿಷ್ಕರಣೆಯನ್ನು ಸರ್ಕಾರ ಮಾಡಲು ಕ್ರಮ ಕೈಗೊಂಡಿದೆಯೇ ; | |
| ಇ | ಸಾರಿಗೆ ಇಲಾಖೆಯ ಪುನಶ್ಚೇತನಕ್ಕಾಗಿ ಸಮಿತಿಯನ್ನು ರಚಿಸಲಾಗಿದೆಯೇ; ಹಾಗಿದ್ದಲ್ಲಿ ಸಮಿತಿ ವರದಿ ಜಾರಿಯಾಗುವುದು ಯಾವಾಗ; ಸಂಪನ್ಮೂಲವನ್ನು ಹೇಗೆ ಕ್ರೋಢಿಕರಣ ಮಾಡಲಾಗುವುದು; | ಹೌದು.<br>ರಾಜ್ಯದ ಎಲ್ಲಾ ರಸ್ತೆ ಸಾರಿಗೆ ಸಂಸ್ಥೆಗಳ ಸ್ವಾವಲಂಬನೆ ಮತ್ತು ಸಂಪನ್ಮೂಲ ಕ್ರೋಢೀಕರಣಗಳ ಸಂಪೂರ್ಣ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸಲು ಸರ್ಕಾರ ಆದೇಶ ಸಂಖ್ಯೆ: ಟಿಡಿ 167 ಟಿಸಿಒ 2021 ದಿನಾಂಕ:30.11.2021ರಲ್ಲಿ ಶ್ರೀ ಎಂ.ಆರ್.ಶ್ರೀನಿವಾಸಮೂರ್ತಿ, ಭಾ.ಆ.ಸೇ.(ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ರಚಿಸಿಸಲಾಗಿರುವ ಏಕ ಸದಸ್ಯ ಸಮಿತಿಯು ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br><br>ಪ್ರಾರಂಭಿಕವಾಗಿ, ನಾಲ್ಕೂ ಸಾರಿಗೆ ಸಂಸ್ಥೆಗಳಿಗೆ ಒಟ್ಟು ರೂ.1200.00 ಕೋಟಿಗಳ ಸಹಾಯವನ್ನು (ಕ.ರಾ.ರ.ಸಾ.ನಿಗಮ-ರೂ.330.00 ಕೋಟಿ, ಬೆಂ.ಮ.ಸಾ.ಸಂಸ್ಥೆ-ರೂ.420.00 ಕೋಟಿ, ವಾ.ಕ.ರ.ಸಾ.ಸಂಸ್ಥೆ-ರೂ.320.00 ಕೋಟಿ ಮತ್ತು ಕ.ಕ.ರ.ಸಾ.ನಿಗಮ-ರೂ.130.00 ಕೋಟಿ) ಸರ್ಕಾರದಿಂದ ಮಂಜೂರು ಮಾಡಿದ್ದು, ಸದರಿ ಅನುದಾನವನ್ನು ಇಂಧನ ವೆಚ್ಚ ಹಾಗೂ |

ಭವಿಷ್ಯ ನಿಧಿ ಬಾಕಿ ಪಾವತಿಗಾಗಿ ಒದಗಿಸಲಾಗಿದೆ.

ಈ ಸಂಸ್ಥೆಯ ನಷ್ಟವನ್ನು ಸರ್ಕಾರ ಹೇಗೆ ಸರಿದೂಗಿಸಲಾಗುವುದು?

ಸಾರಿಗೆ ಸಂಸ್ಥೆಗಳ ನಷ್ಟವನ್ನು ಸರಿದೂಗಿಸಲು ಸರ್ಕಾರವು ಈ ಕೆಳಕಂಡಂತೆ ವಿಶೇಷ ಆರ್ಥಿಕ ಸಹಾಯವನ್ನು ಒದಗಿಸಿದೆ:

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ವಿಶೇಷ ಸಹಾಯಧನದ ವಿವರ | 2020-21 | 2021-22 | 2022-23 (ಆಗಸ್ಟ್ 22ರ ಅಂತ್ಯದ ವರೆಗೆ) |
|---|---|---|---|---|
| 1. ನೌಕರರ ವೇತನ ಪಾವತಿಗಾಗಿ | | | | |
| | ಕ.ರಾ.ರ.ಸಾ.ನಿಗಮ | 563.55 | 235.86 | - |
| | ಬೆಂ.ಮ.ಸಾ.ಸಂಸ್ಥೆ | 690.55 | 582.05 | 35.00 |
| | ವಾ.ಕ.ರ.ಸಾ.ಸಂಸ್ಥೆ | 369.41 | 230.17 | - |
| | ಕ.ಕ.ರ.ಸಾ.ನಿಗಮ | 329.89 | 134.14 | - |
| 2. ಇಂಧನ ವೆಚ್ಚ ಹಾಗೂ ಭವಿಷ್ಯನಿಧಿ ಹಿಂಬಾಕಿ ಪಾವತಿಗಾಗಿ | | | | |
| | ಕ.ರಾ.ರ.ಸಾ.ನಿಗಮ | - | 200.00 | 330.00 |
| | ಬೆಂ.ಮ.ಸಾ.ಸಂಸ್ಥೆ | 308.00 | 400.00 | 420.00 |
| | ವಾ.ಕ.ರ.ಸಾ.ಸಂಸ್ಥೆ | - | - | 320.00 |
| | ಕ.ಕ.ರ.ಸಾ.ನಿಗಮ | - | - | 130.00 |

**3. ಮೋಟಾರು ವಾಹನ ತೆರಿಗೆ ಮನ್ನಾ**

ನಾಲ್ಕೂ ಸಾರಿಗೆ ಸಂಸ್ಥೆಗಳು ಸರ್ಕಾರಕ್ಕೆ 2020-21ನೇ ಸಾಲಿನವರೆಗೆ ಹಾಗೂ 2021-22ನೇ ಸಾಲಿನಲ್ಲಿ ಪಾವತಿಸಬೇಕಾಗಿದ್ದ ಮೋಟಾರು ವಾಹನ ತೆರಿಗೆ ಮೊತ್ತಕ್ಕೆ ವಿನಾಯಿತಿ ನೀಡಲಾಗಿದೆ.

ಇದಲ್ಲದೆ, 2000-01ರಿಂದ ಬೆಂ.ಮ.ಸಾ.ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ ಹಾಗೂ ಕ.ಕ.ರ.ಸಾ.ನಿಗಮಗಳು ಸರ್ಕಾರಕ್ಕೆ ಪಾವತಿಸಬೇಕಾಗಿದ್ದ, ಆದರೆ ಬಾಕಿ ಉಳಿಸಿಕೊಳ್ಳಲಾಗಿದ್ದ ಮೋಟಾರು ವಾಹನ ತೆರಿಗೆ ಮೊತ್ತ ಕ್ರಮವಾಗಿ ರೂ.269.47 ಕೋಟಿ, ರೂ.327.06 ಕೋಟಿ ಮತ್ತು ರೂ.392.33 ಕೋಟಿಗಳನ್ನು ಸರ್ಕಾರದ ಷೇರು ಬಂಡವಾಳವಾಗಿ ಪರಿವರ್ತಿಸಲಾಗಿದೆ.

ಮುಂದುವರೆದು, ಕ.ರಾ.ರ.ಸಾ.ನಿಗಮವು ಸಾರಿಗೆಗಳ ಕಾರ್ಯಾಚರಣೆ ವೆಚ್ಚವನ್ನು ಕಡಿಮೆ ಮಾಡಲು ಏಕ ಚಾಲನಾ ಸಿಬ್ಬಂದಿ ಅನುಸೂಚಿಗಳನ್ನು ಹೆಚ್ಚಿಸಲಾಗುತ್ತಿದೆ.

DFA/893892

| | | |
|---|---|---|
| | | ಬೆಂ.ಮ.ಸಾ.ಸಂಸ್ಥೆಯು ಸಾಂದರ್ಭಿಕ ಒಪ್ಪಂದ, ಖಾಯಂ ಗುತ್ತಿಗೆ ಹಾಗೂ ಡೆಡಿಕೇಟೆಡ್ ಸೇವೆಗಳನ್ನು ಒದಗಿಸುತ್ತಿದೆ. ಸಾರ್ವಜನಿಕರನ್ನು ಸಮೂಹ ಸಾರಿಗೆಯತ್ತ ಸೆಳೆಯಲು ಹಾಗೂ ನಗರದಲ್ಲಿ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸಲು ನಿರ್ಭಯಾ ಯೋಜನೆಯಡಿ Vehicle Tracking System, Passenger Information System, Mobile app ಗಳನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.<br><br>ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಿಂದ ಪಣಜಿ, ಪುಣೆ, ಮುಂಬೈ, ಹೈದ್ರಾಬಾದ, ಕಲಬುರ್ಗಿ, ಬೀದರ, ಬಳ್ಳಾರಿ, ಮೈಸೂರು, ಮಂಗಳೂರು, ಬೆಂಗಳೂರು ಮಾರ್ಗಗಳಲ್ಲಿ ಹಾಗೂ ಹೊಸ ಮಾರ್ಗಗಳಲ್ಲಿ ಪ್ರತಿಷ್ಠಿತ ಸಾರಿಗೆಗಳನ್ನು ಅಳವಡಿಸಿ ಪ್ರಯಾಣಿಕರನ್ನು ಆಕರ್ಷಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಪ್ರಮುಖ ಸ್ಥಳಗಳಿಂದ ಬದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ, ಜೋಗ್ ಫಾಲ್ಸ್, ಗೋಕಾಕ್ ಫಾಲ್ಸ್, ಕಪ್ಪತಗುಡ್ಡ ಮುಂತಾದ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆ. ಆದಾಯ ವೃದ್ಧಿಗೆ "ನಮ್ಮ ಕಾರ್ಗೋ" ಪಾರ್ಸಲ್ ಸೇವೆಯನ್ನು ಆರಂಭಿಸಲಾಗಿದೆ.<br><br>ಕ.ಕ.ರ.ಸಾ.ನಿಗಮದ ಘಟಕ/ವಿಭಾಗಗಳ ಮಟ್ಟದಲ್ಲಿ ದಿನಂಪ್ರತಿ ಅನುಸೂಚಿವಾರು ಆದಾಯಗಳನ್ನು ಪರಿಶೀಲಿಸಿ, ಕಡಿಮೆ ಆದಾಯ ಬರುವ / ಹೆಚ್ಚಿಗೆ ನಷ್ಟ ಉಂಟು ಮಾಡುವ ಅನುಸೂಚಿಗಳನ್ನು ಪರಿಷ್ಕರಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಡಬಲ್ ಕ್ರೂ ಅನುಸೂಚಿಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಣೆ ಮಾಡಲಾಗುತ್ತಿದೆ. |

ಸಂಖ್ಯೆ: ಟಿಡಿ 187 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು